





ಸುವರ್ಣಭಾರತೀ

# ನಮಃ ಶಿವಾಯ

## ಸ್ತೋತ್ರಮಹಾಸಮರ್ಪಣೆ



ಪರಶಿವಾವತಾರರಾದ ಜಗದ್ಗುರು ಶ್ರೀಶಂಕರಭಗವತ್ಪಾದಾಚಾರ್ಯರು ಹನ್ನೆರಡು ಶತಮಾನಗಳ ಹಿಂದೆ ನಮ್ಮ ಪವಿತ್ರ ಭಾರತದೇಶದಲ್ಲಿ ಅವತರಿಸಿ ಸನಾತನ ವೈದಿಕ ಧರ್ಮ ಮತ್ತು ಉಪನಿಷತ್ಪ್ರತಿಪಾದ್ಯವಾದ ಅದ್ವೈತಸಿದ್ಧಾಂತವನ್ನು ಉದ್ಧಾರ ಮಾಡಿ ಅವುಗಳ ನಿರಂತರ ಪ್ರಚಾರಕ್ಕಾಗಿ ಭಾರತದ ನಾಲ್ಕು ದಿಕ್ಕುಗಳಲ್ಲೂ ನಾಲ್ಕು ಆಮ್ನಾಯ ಪೀಠಗಳನ್ನು ಸ್ಥಾಪನೆ ಮಾಡಿದರೆಂಬ ವಿಷಯವು ಜಗದ್ವಿದಿತವೇ ಆಗಿದೆ. ಈ ಚತುರಾಮ್ನಾಯ ಪೀಠಗಳಲ್ಲಿ ದಕ್ಷಿಣಾಮ್ನಾಯ ಶೃಂಗೇರಿ ಶಾರದಾಪೀಠವು ಇಂದಿಗೂ ಅವಿಚ್ಛಿನ್ನ ಗುರುಪರಂಪರೆಯೊಂದಿಗೆ ಕಂಗೊಳಿಸುತ್ತಿದೆ. ಪ್ರಸ್ತುತ ಈ ಪೀಠದ ಮೂವತ್ತಾರನೆಯ ಅಧಿಪತಿಗಳು **ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು** ಸಂನ್ಯಾಸ ಸ್ವೀಕಾರ ಮಾಡಿ ಐವತ್ತು ವರ್ಷಗಳನ್ನು ಪೂರೈಸುತ್ತಿದ್ದಾರೆ.

ಪ್ರಸ್ತುತ ಅವರ ಸಂನ್ಯಾಸ ಸ್ವೀಕಾರದ ಐವತ್ತನೆಯ ವರ್ಷದ ಸ್ವರ್ಣಮಹೋತ್ಸವವನ್ನು **'ಸುವರ್ಣಭಾರತೀ'** ಎಂಬ ಹೆಸರಿನಲ್ಲಿ ವರ್ಷಪೂರ್ತಿ ಆಚರಿಸಬೇಕೆಂದು ತತ್ಕರಕಮಲಸಂಜಾತರಾದ **ಜಗದ್ಗುರು ಶ್ರೀಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳವರು** ಸಂಕಲ್ಪಿಸಿದ್ದಾರೆ. ತದನುಸಾರ ಲೋಕಕ್ಷೇಮಾರ್ಥವಾಗಿ ಪಂಚಾಯತನ ದೇವತಾರಾಧನೆ ಮೊದಲಾದ ಅನೇಕ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತಲಿದ್ದು, ಅವುಗಳಲ್ಲಿ ಶಾಂಕರ ಸ್ತೋತ್ರ ಸಮರ್ಪಣೆಯೂ ಒಂದಾಗಿದೆ.

ಉಭಯ ಜಗದ್ಗುರುಗಳವರ ಅಪ್ಪಣೆ ಹಾಗೂ ಅನುಗ್ರಹದೊಂದಿಗೆ ಶ್ರೀಮಠದ ಶ್ರೀಶಾಂಕರ ತತ್ತ್ವಪ್ರಸಾರ ಅಭಿಯಾನ ಮತ್ತು ವೇದಾಂತಭಾರತೀ ಸಂಸ್ಥೆಯ ಆಶ್ರಯದಲ್ಲಿ ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠಾಧೀಶರಾದ **ಪರಮಪೂಜ್ಯ ಶ್ರೀಶ್ರೀ ಶಂಕರಭಾರತೀ ಮಹಾಸ್ವಾಮಿಗಳವರ** ಮಾರ್ಗದರ್ಶನದಲ್ಲಿ ಕಲ್ಯಾಣವೃಷ್ಟಿಸ್ತವ, ಶಿವಪಂಚಾಕ್ಷರ ನಕ್ಷತ್ರಮಾಲಾಸ್ತೋತ್ರ ಮತ್ತು ಲಕ್ಷ್ಮೀನೃಸಿಂಹಕರಾವಲಂಬಸ್ತೋತ್ರ ಈ ಮೂರು ಸ್ತೋತ್ರಗಳ ವಿಶೇಷ ಮಹಾಭಿಯಾನವನ್ನು ಕೈಗೊಳ್ಳಲಾಗಿದೆ. ಶ್ರೀಶಂಕರಭಗವತ್ಪಾದರಿಂದ ರಚಿತವಾದ ಈ ಮೂರು ಸ್ತೋತ್ರಗಳು ಪ್ರತಿಯೊಬ್ಬರಿಗೂ ಅತ್ಯಂತ ಪುಣ್ಯವನ್ನುಂಟುಮಾಡಿ, ವಿಶೇಷ ಫಲಗಳನ್ನು ನೀಡುವ ಸಾಮರ್ಥ್ಯವುಳ್ಳದ್ದಾಗಿವೆ.

ಕಲ್ಯಾಣವೃಷ್ಟಿಸ್ತವದಲ್ಲಿ ಶ್ರೀವಿದ್ಯಾ ಪಂಚದಶಾಕ್ಷರೀ ಮಹಾಮಂತ್ರದ ಅಕ್ಷರಗಳಿಂದ ಪ್ರತಿ ಶ್ಲೋಕವೂ ಪ್ರಾರಂಭವಾಗುತ್ತದೆ. ಜಗನ್ಮಾತೆಯನ್ನು ಸ್ತುತಿಸುವ ಈ ಸ್ತೋತ್ರವು ಕಲ್ಯಾಣವೃಷ್ಟಿಯನ್ನು ಸುರಿಸಬಲ್ಲದು. ಲಕ್ಷ್ಮೀನೃಸಿಂಹಸ್ವಾಮಿಯನ್ನು ಸ್ತುತಿಸುವ ಕರಾವಲಂಬಸ್ತೋತ್ರವು ಸಂಸಾರದುಃಖವನ್ನು ದಾಟಿಸುತ್ತದೆ. ಪ್ರತಿ ಶ್ಲೋಕದ ನಾಲ್ಕು ಪಂಕ್ತಿಗಳಲ್ಲಿ ಶಿವಪಂಚಾಕ್ಷರೀ ಮಂತ್ರವನ್ನು ಹೊಂದಿರುವ ಶಿವಪಂಚಾಕ್ಷರ ನಕ್ಷತ್ರಮಾಲಾಸ್ತೋತ್ರದಲ್ಲಿ 108 ಬಾರಿ ಶಿವಪಂಚಾಕ್ಷರೀ ಮಂತ್ರವನ್ನು ಉಲ್ಲೇಖಿಸಿ, ಸರಳವಾಗಿ ಶಿವತತ್ತ್ವವನ್ನು ಆಚಾರ್ಯರು ಉಪದೇಶಿಸಿದ್ದಾರೆ. ಈ ಮಂತ್ರದ ಉಚ್ಚಾರಣೆಯಿಂದ ಸಾಧಕನ ಮನೋಭೀಷ್ಟಗಳು ನೆರವೇರುವುದರಲ್ಲಿ ಸಂದೇಹವಿಲ್ಲ.

ಜಗದ್ಗುರು ಮಹಾಸ್ವಾಮಿಗಳವರ ಅಪ್ಪಣೆಯಂತೆ ಕಳೆದ ಮಹಾಶಿವರಾತ್ರಿಯ ಪರ್ವದಿನದಂದು ಈ ಮಹಾಭಿಯಾನವು ಶುಭಾರಂಭಗೊಂಡಿದ್ದು ಈಗಾಗಲೇ ರಾಜ್ಯಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ಆಸ್ತಿಕರು ತಮ್ಮನ್ನು ಈ ಅಭಿಯಾನದಲ್ಲಿ ತೊಡಗಿಸಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ವ್ಯಾಪಕವಾಗಿ ಈ ಮಹಾಭಿಯಾನವು ನಡೆಯುತ್ತಿದ್ದು ಎರಡುಲಕ್ಷಕ್ಕೂ ಹೆಚ್ಚಿನ ಜನರಿಗೆ ಈ ಸ್ತೋತ್ರಗಳನ್ನು ತಲುಪಿಸುವ ನಿಟ್ಟಿನಲ್ಲಿ ಕಾರ್ಯಕರ್ತರು ಕಾರ್ಯಪ್ರವೃತ್ತರಾಗಬೇಕಿದೆ. ಈ ಸ್ತೋತ್ರಗಳ ಮಹಾಸಮರ್ಪಣೆಯ ಕಾರ್ಯಕ್ರಮವು **ಜಗದ್ಗುರು ಶ್ರೀಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳವರ** ದಿವ್ಯ ಸಾನ್ನಿಧ್ಯದಲ್ಲಿ ಅವರ ಅಪ್ಪಣೆಯಂತೆ **2024 ಅಕ್ಟೋಬರ್ 26 ಶನಿವಾರದಂದು ಬೆಳಿಗ್ಗೆ 10.30 ಗಂಟೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ಸಂಪನ್ನಗೊಳ್ಳಲಿದೆ.** ಸಮಸ್ತ ಆಸ್ತಿಕರೂ ಈ ಸ್ತೋತ್ರಗಳನ್ನು ಅಭ್ಯಾಸ ಮಾಡಿ, ಪಾರಾಯಣ ಮಾಡಿ, ಜಗದ್ಗುರುಗಳ ದಿವ್ಯಸಾನ್ನಿಧ್ಯದಲ್ಲಿ ನಡೆಯುವ ಸಮರ್ಪಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸ್ತೋತ್ರಸಮರ್ಪಣೆಯನ್ನು ಮಾಡುವುದರ ಮೂಲಕ ಶ್ರೀ ಆದಿ ಶಂಕರಾಚಾರ್ಯರ ಹಾಗೂ ಉಭಯ ಜಗದ್ಗುರು ಮಹಾಸ್ವಾಮಿಗಳವರ ಪರಮಾನುಗ್ರಹಕ್ಕೆ ಪಾತ್ರರಾಗಬೇಕೆಂದು ಕೋರುತ್ತಿದ್ದೇವೆ.


**ಶ್ರೀ ಶಾಂಕರ ತತ್ತ್ವಪ್ರಸಾರ ಅಭಿಯಾನ**

✆: 9448055193, 9845400948

**ವೇದಾಂತಭಾರತೀ**

✆: 8217391824, 9611809819


ಈ ಮಹಾಭಿಯಾನದ ಕುರಿತಾದ ಹೆಚ್ಚಿನ ಮಾಹಿತಿಗಳನ್ನು https://kalyaanavrusti.blogspot.com/ ಈ ಜಾಲತಾಣದಲ್ಲಿ ಪಡೆಯಬಹುದಾಗಿದೆ. ಈ QR Code ಮೂಲಕ **ಶಾಂಕರಸ್ತೋತ್ರಗಳ** ಮೊಬೈಲ್ ಅಪ್ಲಿಕೇಶನ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.